

ಡಿಸೆಂಬರ್ ತಿಂಗಳ ಕೊರೆವ ಚಳಿ. ಬೆಳಿಗ್ಗೆ ಒಂಭತ್ತು ಗಂಟೆಯಾದರೂ ಮುಸುಕಿದ ಮಂಜು. ದೂರದ ಬೆಟ್ಟಸಾಲಿನ ನೆತ್ತಿಯನ್ನು ತಬ್ಬಿದ ಬೆಳ್ಳಿಮೋಡಗಳ ತೆಳುಪರದೆ. ಕಾಫಿಗಿಡದಲ್ಲಿ ಗೆಜ್ಜೆ ಕಟ್ಟಿದಂತೆ ಕಾಣುವ ಕೊಯ್ಲಿಗೆ ಸಿದ್ದವಾಗಿ ನಿಂತ ಕಾಫಿಹಣ್ಣು. ಆಗಷ್ಟೇ ನಿಂತ ಮಳೆಯಿಂದಾಗಿ ಹಚ್ಚಹಸಿರು ಹೊದ್ದ ನಿಸರ್ಗ, ಜಾರುವ ಬಂಡೆಗಳು, ಪಾಚಿಗಟ್ಟಿದ ರಸ್ತೆಬದಿ, ಬೆಟ್ಟ, ದಿಣ್ಣೆಗಳ ಇಳಿಜಾರಿನಲ್ಲಿ ಸಣ್ಣಗೆ ಹರಿಯುತ್ತಿದ್ದ ಒರತೆ– ಹೀಗೆ ಹತ್ತು ಹಲವು ಮನಮೋಹಕ ನೋಟಗಳ ರಸದೌತಣ ಲಭಿಸುವುದು ಮಲ್ಲಳ್ಳಿ ಜಲಪಾತದ ಹಾದಿಯಲ್ಲಿ ಸಾಗಿದಾಗ.

ಕೊಡಗಿನ ಸೋಮವಾರಪೇಟೆ ತಾಲೂಕಿನ ಸೆರಗಿನಲ್ಲಿ ಪಶ್ಚಿಮ ಘಟ್ಟಗಳ ಪರ್ವತ ಪಂಕ್ತಿಗಳ ತಪ್ಪಲಲ್ಲಿ ಹರಿದು ಬರುವ ಕುಮಾರಧಾರಾ ನದಿ ಮಲ್ಲಳ್ಳಿಯ ಸಮೀಪ ಸುಮಾರು ಇನ್ನೂರು ಅಡಿಗಳಷ್ಟು ಎತ್ತರದಿಂದ ಬೃಹತ್ ಬಂಡೆಗಳ ಮೇಲಿಂದ ಧುಮ್ಮಿಕ್ಕಿ ನಯನ ಮನೋಹರ ಜಲಪಾತವನ್ನು ಪ್ರಕೃತಿಪ್ರಿಯರಿಗಾಗಿ ಸೃಷ್ಟಿಸಿದೆ. ಒಂದೆಡೆಗೆ ಪುಷ್ಪಗಿರಿಯ ಬೆಟ್ಟಸಾಲುಗಳು, ಇನ್ನೊಂದೆಡೆಗೆ ಬಿಸಿಲೆ ಘಾಟಿಯ ಪರ್ವತ ಪಂಕ್ತಿಗಳು. ಇವುಗಳ ನಡುವೆ ಬಳುಕುತ್ತಾ ಹರಿವ ಈ ವಯ್ಯಾರಿಯ ಅಂದಕ್ಕೆ ಮರುಳಾಗದವರಿಲ್ಲ. ಹಸಿರು ಹಾಸಿದಂತೆ ದಟ್ಟವಾಗಿ ಹರಡಿದ ಕಾಡಿನ ನಡುವೆ ಹರಿಯುತ್ತಾ ಬಂದು, ವಿಶಾಲ ಕಣಿವೆಯಲ್ಲಿ ಪ್ರಶಾಂತವಾಗಿ ಬಂಡೆಬೇರುಗಳ ಸಂದಿಯಲ್ಲಿ ತುಳುಕುತ್ತಾ, ಬಳುಕುತ್ತಾ, ಬರುವ ಕುಮಾರಧಾರಾ ನದಿ ಇಲ್ಲಿ ಮಾತ್ರ ತನ್ನ ರೌದ್ರಾವತಾರವನ್ನು ಪ್ರದರ್ಶಿಸಿದೆ.

ಮಲ್ಲಳ್ಳಿ ಜಲಪಾತದ ವೈಶಿಷ್ಟ್ಯವೆಂದರೆ, ಈ ಜಲಪಾತದ ಸೊಬಗನ್ನು ಎತ್ತರದ ಸ್ಥಳದಲ್ಲಿ ನಿಂತು ಸವಿಯಲು ಸಾಧ್ಯ. ಎತ್ತರದ ಸ್ಥಳದಲ್ಲಿ ನಿಂತು ನೋಡುವುದರಿಂದ ಜಲಪಾತದ ಮೇಲಿನ ಹಾಗೂ ಕೆಳ ಹರಿವಿನ ಸೊಗಸಾದ ವಿಹಂಗಮ ನೋಟ ಲಭಿಸುತ್ತದೆ. ಸುಮಾರು ಇನ್ನೂರು ಅಡಿ ಎತ್ತರದಿಂದ ಕಪ್ಪನೆಯ ಬಂಡೆಗಳ ಮೇಲಿಂದ ಹಾಲಿನ ನೊರೆಯಂತೆ ಭೋರ್ಗರೆದು ಧುಮ್ಮಿಕ್ಕುವ ಜಲಧಾರೆಯ ಸೊಗಸು ಸವಿಯಲು ನವೆಂಬರ್‌ನಿಂದ ಜನವರಿ ತಿಂಗಳು ಸೂಕ್ತ ಸಮಯ. ಶುದ್ಧ ಮಲೆನಾಡು ವಾತಾವರಣ, ತೋಟದ ಮನೆಗಳು, ಬತ್ತದ ಗದ್ದೆಗಳು ಹೀಗೆ ಮುದ ನೀಡುವ ನೋಟಗಳು ಜಲಪಾತದ ದೃಶ್ಯ ಸವಿಯಲು ಸಾಗುವ ಪ್ರವಾಸಿಗರಿಗೆ ಲಭಿಸುತ್ತವೆ.

**ಹೋಗುವುದು ಹೇಗೆ?**

ಸೋಮವಾರಪೇಟೆಯಿಂದ ಸುಮಾರು ಇಪ್ಪತ್ತೈದು ಕಿ.ಮೀ ದೂರದಲ್ಲಿರುವ ಮಲ್ಲಳ್ಳಿ ಜಲಪಾತ ಬೀದಳ್ಳಿಯ ಹಾದಿಯಲ್ಲಿದೆ. ಹಂಚಿನಳ್ಳಿಯಲ್ಲಿ ಎಡಕ್ಕೆ ತಿರುಗಿ ಬೀದಳ್ಳಿಯ ದಾರಿಯಲ್ಲಿ ಎರಡು ಕಿ.ಮೀ ಕ್ರಮಿಸಿದರೆ ಮಲ್ಲಳ್ಳಿ ಜಲಪಾತವನ್ನು ತಲುಪಬಹುದು. ಸೋಮವಾರಪೇಟೆಯಿಂದ ಜೀಪುಗಳು ಬಾಡಿಗೆಗೆ ಸಿಗುತ್ತವೆ. ಈ ಜಲಪಾತವನ್ನು ನೋಡಿದ ಬಳಿಕ ಮಲ್ಲಳ್ಳಿ–ಮಾಲನೆ ಮಾರ್ಗವಾಗಿ ಬಿಸಿಲೆ ಘಾಟಿಯನ್ನೂ ನೋಡಿ ಬರಬಹುದು. ಒಂದು ದಿನದ ಪ್ರವಾಸಕ್ಕೆ ಸೂಕ್ತವಾದ ತಾಣ.

# ಮೋಹಕ ಮಲ್ಲಳ್ಳಿ ಫಾಲ್ಸ್

■ ಚಿತ್ರಬರಹ

**ರಶ್ಮಿ ಬಿ.ವಿ.**

